ಮಾಡುವುದಕ್ಕಾಗುವುದಿಲ್ಲ, ನನಗೂ ಡಿನ್ಯೇ ಮಾಡುವುದಕ್ಕಾಗುವುದಿಲ್ಲ. ನಿಮ್ಮ ಅಧಿಕಾರಿಗಳು ಡಿನ್ಯೇ ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ಯಾರನ್ನು ಅರೆಸ್ಟ್ ಮಾಡಿಲ್ಲ. ಯಾರೋ ಜನರನ್ನು ತರುವುದು, ಅವರಿಗೆ 10-20 ಸಾವಿರ ಹಣವನ್ನು ಕೊಡುವುದು ಮತ್ತೆ ಒಪ್ಪಿಸುವುದು ಮನೆಗೆ ಕಳುಹಿಸುವುದು. 2 ವರ್ಷ 3 ವರ್ಷ ಜೈಲಿಗೆ ಕಳುಹಿಸುವುದು, ಹಾಗಾಗಿ ಇದರ ಬಗ್ಗೆ ಒಂದು ಸಮಗ್ರವಾದ ತನಿಖೆಯನ್ನು ಮಾಡಬೇಕೆಂದು ನಾನು ಹೇಳುತ್ತಿದ್ದೇನೆ. ಆಂದರೆ ಸತ್ಯ ಹೊರಗೆ ಬರುತ್ತದೆ. ಯಾರು ಜವಾಬ್ದಾರರಿರುತ್ತಾರೆ ಅವರ ವರ್ತನೆಯ ಬಗ್ಗೆ ಒಂದು ಭಯದ ವಾತಾವರಣ ನಿರ್ಮಾಣವಾಗುತ್ತದೆ. ಇಲ್ಲವೆಂದರೆ ನಿಮ್ಮ ಕಾನೂನು ವ್ಯವಸ್ಥೆಯ ಬಗ್ಗೆ ಯಾರಿಗೂ ಭಯವಿರುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ:- ಸನ್ಮಾನ್ಯ ಅಧ್ಯಕ್ಷರೇ, ಈಗ ಸಮಗ್ರ ತನಿಖೆಯ ಬಗ್ಗೆ ಕೇಳುತ್ತಿದ್ದೀರಿ. ಬರಿ 20-2-93ರ ಇದರ ಬಗ್ಗೆ ಸೀಮಿತವಾಗಿದ್ದರೆ ನಾನು ಉತ್ತರ ಕೊಡಬಹುದು. ಆದರೆ ಸಮಗ್ರ ತನಿಖೆಯಾಗಬೇಕೆಂದು ತಾವು ಕೇಳಿಕೊಂಡಿದ್ದೀರಿ ಅದಕ್ಕೆ 12 ಗಂಟೆಗೆ ನಾನು ತಮಗೆ ಉತ್ತರ ಕೊಡುತ್ತೇನೆ.

(4) ನಾಗಮಂಗಲ ತಾಲ್ಲೂಕಿನ ಬೊನಾಳೆ ಕಾಲುವೆಗೆ ಸ್ವಾಧೀನಪಡಿಸಿಕೊಂಡ ರೈತರ ಭೂಮಿಗೆ ಪರಿಹಾರ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್:-ಸನ್ಮಾನ್ಯ ಅಧ್ಯಕ್ಷರೇ, ಮದ್ದೂರ್ ಮತ್ತು ನಾಗಮಂಗಲ ತಾಲ್ಲೂಕಿನಲ್ಲಿ ತೋಡಲಾದಂಥ ಬೊನಾಳೆ ಕಾಲುವೆ ಎಡದಂಡೆ ಮತ್ತು ಬಲದಂಡೆ ಕಾಲುವೆಗೆ ಸ್ವಾಧೀನಪಡಿಸಿಕೊಂಡಂಥ 8 ಗ್ರಾಮಗಳ ರೈತರ ಭೂಮಿಗೆ 18 ವರ್ಷದಿಂದ ಪರಿಹಾರ ಕೊಟ್ಟಿಲ್ಲ. ರೈತರು ಪರಿಹಾರಕ್ಕಾಗಿ ಸಾಕಷ್ಟು ಪ್ರಯತ್ನ ಮಾಡಿದರೂ, ಸಿಕ್ಕಿಲ್ಲ. ಮಾನ್ಯ ಮಂತ್ರಿಗಳಿಗೆ ಇದರ ಬಗ್ಗೆ ಅಹವಾಲು ಕೊಟ್ಟಿದ್ದಾರೆ, ತೀವ್ರಗತಿಯಿಂದ ನಾವು ಪರಿಶೀಲನೆ ಮಾಡುತ್ತೇವೆ ಎನ್ನತಕ್ಕಂಥ ಉತ್ತರವನ್ನು ಸಹ ಕೊಟ್ಟಿದ್ದಾರೆ. ಮತ್ತೆ ಒಂದು ವರ್ಷ ಕಳೆಯಿತು ಇನ್ನುತನಕ ಪರಿಹಾರ ಸಿಕ್ಕಿಲ್ಲ. ಆ ಕಾರಣ ತೀವ್ರ ಪರಿಹಾರವನ್ನು ಕೊಡಬೇಕೆಂದು ನಾನು ಕೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಮಾನ್ಯ ಅಧ್ಯಕ್ಷರೇ, ವರದಿಯನ್ನು ತರಿಸಿ ನಾವು ಪರಿಶೀಲನೆ ಮಾಡುತ್ತೇವೆ.

(5) ಸಾಗರ ತಾಲ್ಲೂಕು ಕುರುವಳ್ಳಿ ಗ್ರಾಮದ ಶ್ರೀಮತಿ ಪ್ರೇಮ ಎನ್ನುವವರ ಕೊಲೆ.

ಶ್ರೀಮತಿ ಮೋಟಮ್ಮ:- ಸನ್ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ತಮ್ಮ ಗಮನವನ್ನು ಸೆಳೆಯಲಿಕ್ಕೆ ಇಷ್ಟಪಡುತ್ತೇನೆ. ಮತ್ತೊಂದು ನೋವಿನ ಸಂಗತಿ ಎಂದರೆ ಶ್ರೀಮತಿ ಪ್ರೇಮ, ಕುರುವಳ್ಳಿ, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ, ಇಲ್ಲಿ ಇವಳನ್ನು ಅಮಾನುಷವಾಗಿ ಕೊಲೆ ಮಾಡಿರುವ ಒಂದು ಪ್ರಸಂಗ ಬೆಳಕಿಗೆ ಬಂದಿದೆ. ನಾವು ಅಲ್ಪಸ್ವಲ್ಪ ಇಲ್ಲಿ ಕುಳಿತಿರುವ ಮಹಿಳಾ ಶಾಸಕರು ಹೆಣ್ಣುಮಕ್ಕಳಿಗೆ ಆಗುತ್ತಿರುವ ಅನ್ಯಾಯವನ್ನು ಬೆಳಕಿಗೆ ತರುತ್ತಿದ್ದೇವೆನ್ನುವ ವಿಶ್ವಾಸದಿಂದ ನಮಗೆ ಈಗ ಇಂಥ ಪ್ರಕರಣಗಳ ಬಗ್ಗೆ ಮಾಹಿತಿ ಒದಗಿ ನಾವು ಇಲ್ಲಿ ಪ್ರಸ್ತಾಪ ಮಾಡಲಿಕ್ಕೆ ಅವಕಾಶವಾಗುತ್ತಿದೆ. ಈ ಪ್ರೇಮಳ ಕೊಲೆಗೆ ಕಾರಣರು ಯಾರು? ಯಾವ ಕಾರಣಕ್ಕಾಗಿ ಈ ಹೆಣ್ಣು ಮಗಳನ್ನು ಕೊಲೆ ಮಾಡಿದರು ಇದರ ಬಗ್ಗೆ ಇನ್ನೂ ತನಿಖೆ ಏತಕ್ಕೆ ಆಗಲಿಲ್ಲ ಮತ್ತು ಸಂಬಂಧಪಟ್ಟವರಿಗೆ ಏತಕ್ಕೆ ಶಿಕ್ಷೆಯಾಗಲಿಲ್ಲವೆನ್ನುವುದನ್ನು ನಾನು ಪ್ರಶ್ನೆ ಮಾಡುತ್ತಾ ಕೂಡಲೇ ಶಿವಮೊಗ್ಗ ಡಿಸ್ಟ್ರಿಕ್ಟ್ ತುರುವಳ್ಳಿ, ಸಾಗರ ತಾಲ್ಲೂಕು, ಅಲ್ಲಿ ಕೂಡಲೇ ಎಂಥ ವ್ಯಕ್ತಿಯಾಗಿದ್ದರೂ ಎಂಥ ಪ್ರಭಾವಿಯುತ ವ್ಯಕ್ತಿಯಾಗಿದ್ದರೂ ಅವರನ್ನು ಬಂಧಿಸಿ ಶಿಕ್ಷೆಗೆ ಒಳಪಡಿಸಬೇಕು.

ಪುನಃ ಎಲ್ಲಿಯೂ ಸಮಾಜದಲ್ಲಿ ಮಹಿಳೆಯರ ಸಾವಾಗಲಿ, ಅತ್ಯಾಚಾರ ಪ್ರಕರಣವಾಗಲಿ ಮರುಕಳಿಸಬಾರದು. ಮೊನ್ನೆ ದಿವಸ ಹೆಣ್ಣು ಮಕ್ಕಳ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ; ಹಾನಗಲ್‌ನಲ್ಲಿ